**ಇಂದು ದಿನಾಂಕ:*26.09.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಐ.ಆರ್.ಎಸ್. ವಕೀಲರಿಂದಃ**

ಮಂಡಿಗೌಡ ನನ್ನ ತಾತ. ಶಾಶ್ವತ ಪ್ರತಿಬಂಧಕಾಜ್ಞೆಗಾಗಿ ವಾದಿ ಈ ಕೇಸು ಹಾಕಿದ್ದಾರೆ. ದಾವಾ ಆಸ್ತಿಯ ಸ.ನಂ.41. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 7 ಎಕರೆ 11 ಗುಂಟೆ ಜಮೀನು ಇದೆ ಆ ಪೈಕಿ 4 ಎಕರೆಗೆ ಕೇಸು ಹಾಕಿದ್ದಾರೆ. ವಾದಿಯ ತಂದೆ ಹೆಸರು ಗೊತ್ತಿಲ್ಲ. ವಾದಿಯ ತಂದೆಯ ಹೆಸರು ನಿಂಗೇಗೌಡರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತಃ ವಾದಿಗೆ ಸೇರಿದೆ ಎಂದರೆ ಗೊತ್ತಿಲ್ಲ. ದಿನಾಂಕ 12.04.1984 ರ ದತ್ತು ಸ್ವೀಕಾರ ಪತ್ರದ ಮೂಲಕ ದಾವಾ ಆಸ್ತಿ ವಾದಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಕೀಲರು ಸಲ್ಲಿಸಿರುವ ತಕರಾರಿನಲ್ಲಿ ಏನು ಇದೆ ಎಂದು ಗೊತ್ತಿಲ್ಲ. ನನ್ನ ತಕರಾರಿನಲ್ಲಿ ಇರುವ ಅಂಶಗಳು ಗೊತ್ತಿದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಿರಿಯಾಪಟ್ಟಣದ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಾನು ಅಸಲು ದಾವಾ ನಂಬರ್ 175/2021 ರಂತೆ ಒಂದು ದಾವೆ ಹಾಕಿದ್ದೇನೆ ಎಂದರೆ ಸರಿ. ಆ ಕೇಸಿನಲ್ಲಿ ನಾವೇ ಸ್ವಾಧೀನಾನುಭವದಲ್ಲಿ ಇರುವುದಾಗಿ ತೀರ್ಪು ಆಗಿದೆ. ನಾವು ಸಲ್ಲಿಸಿದ್ದ ದಾವೆ ದಿನಾಂಕ 01.10.2024 ರಂದು ವಜಾ ಆಗಿದೆ ಎಂದರೆ ಸರಿ. ಈ ದಾವೆಯಲ್ಲಿ ವಾದಿ ಮಂಡಿಗೌಡ ನನ್ನ ತಾತ ಎಂದು ಬರೆಸಿದ್ದೇನೆ. ವಾದಿಗೆ ಈಗ ಸುಮಾರು 80 ವರ್ಷಕ್ಕಿಂತ ಜಾಸ್ತಿಯಾಗಿದೆ. ವಾದಿ ಈಗ ತನ್ನ ಮಗನ ಜೊತೆ ವಾಸವಿದ್ದಾರೆ. ನಾನು ಮನುಗನಹಳ್ಳಿಯ ಆನೆಕಟ್ಟೆಯ ಹಡ್ಲುವಿನಲ್ಲಿ ವಾಸವಿದ್ದೇನೆ. ನನಗೆ ಮದುವೆಯಾಗಿ 15 ವರ್ಷಗಳಾಗಿವೆ. 2 ನೇ ಪ್ರತಿವಾದಿಯ ಮದುವೆಯಾಗಿ 7 ವರ್ಷಗಳಾಗಿವೆ. ಈಗ ನಾನು ಗಂಡನ ಮನೆ ಮತ್ತು ಮನುಗನಹಳ್ಳಿ ಎರಡೂ ಕಡೆ ವಾಸವಿರುತ್ತೇನೆ. ಮನುಗನಹಳ್ಳಿಯಲ್ಲಿ ನಾನು ವಾಸವಿರುವ ಮನೆಯ ಅಸೆಸ್ ಮೆಂಟ್ ನಂಬರ್

ಮತ್ತು ಜಂಜರ್ ನಂಬರ್ ಗೊತ್ತಿಲ್ಲ. ಹಳೆಹಡ್ಲುವಿನಲ್ಲಿ ನಾವು ವಾಸವಿರುವ ಮನೆ ಯಾರಿಗೆ ಹೇಗೆ ಬಂದಿದೆ ಎಂದು ಗೊತ್ತಿಲ್ಲ ಸಾಕ್ಷಿಯು ಸ್ವತಃ ಹೇಳುವುದೆಂದರೆ ಸರ್ಕಾರದಿಂದ ಜನತಾ ಮನೆ ಕಟ್ಟಿಕೊಟ್ಟಿದ್ದಾರೆ. ನನ್ನ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ನನ್ನ ಗಂಡನ ಮನೆಯ ವಿಳಾಸಕ್ಕೆ ಇದೆ. ನಾನು ಹಡ್ಲುವಿನಲ್ಲಿ ವಾಸವಿರುವ ಬಗ್ಗೆ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಇತ್ತು ಈಗ ನನ್ನ ಗಂಡನ ಮನೆಗೆ ಬದಲಾವಣೆ ಮಾಡಿಕೊಂಡಿದ್ದೇನೆ. ನಾನು ಕಣಗಾಲು ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮದುವೆಗೆ ಮೊದಲು ಕಣಗಾಲಿನಲ್ಲಿ ವಾಸವಿದ್ದ ಬಗ್ಗೆ SSLC marks card ಇದೆ ಆಧಾರ್ ಕಾರ್ಡ್ ಇರುವುದಿಲ್ಲ. ನನ್ನ ತಂದೆ ಕೃಷ್ಣೇಗೌಡ ಮೂಲತಃ ರಾಜನಬಿಳಗುಲಿ ಗ್ರಾಮದವರು ಎಂದರೆ ಸರಿ. ರಾಜನಬಿಳಗುಲಿಯಲ್ಲಿ ನಮ್ಮ ತಂದೆಗೆ ಒಂದು ಮನೆ ಮತ್ತು ಜಮೀನು ಇದೆ ಎಂದರೆ ಸರಿ. ಆ ಜಮೀನು ನನ್ನ ತಂದೆಯ ಹೆಸರಿನಲಿಲ್ಲ ಅವರ ತಂದೆಯ ಹೆಸರಿನಲ್ಲಿದೆ. ನನ್ನ ತಂದೆ ಜಮೀನಿನಲ್ಲಿ ನನಗೆ ಭಾಗಬೇಕೆಂದು ದಾವೆ ಸಲ್ಲಿಸಿಲ್ಲ. ದಾವೆ ಸಲ್ಲಿಸುವ ಮೊದಲು ವಾದಿ ನಮ್ಮ ಜೊತೆ ಆನೆಕಟ್ಟೆಹಡ್ಲುವಿನಲ್ಲಿ ನಾವು ಚಿಕ್ಕವರಾಗಿದ್ದ ಕಾಲದಿಂದಲೂ ವಾಸವಿದ್ದರು. ವಾದಿ ನಮ್ಮ ಜೊತೆ ವಾಸವಿದ್ದ ಬಗ್ಗೆ ರೇಷನ್ ಕಾರ್ಡ್ ಇರುವುದಿಲ್ಲ ಅವರ ಮಗನ ಜೊತೆ ವಾಸವಿರುವ ಬಗ್ಗೆ ರೇಷನ್ ಕಾರ್ಡ್ ಇದೆ. ನಮ್ಮ ತಾತ ನಮ್ಮ ಜಮೀನಿಗೆ ತೊಂದರೆ ಕೊಡುತ್ತಿದ್ದ ಕಾರಣ ಅಸಲು ದಾವಾ ನಂಬರ್ 175/2021 ರಲ್ಲಿ ದಾವೆ ಸಲ್ಲಿಸಿದ್ದೆ. ದಾವಾ ಆಸ್ತಿಯಲ್ಲಿ ವಾದಿ ವ್ಯವಸಾಯ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ ನಾವು ಮಾಡುತ್ತಿದ್ದೇವೆ. ದಾವಾ ಆಸ್ತಿಯ ಸಂಬಂಧ ನನ್ನ ತಾತ ಯಾವುದೇ ನೊಂದಣಿ ದಾಖಲೆ ಮೂಲಕ ವರ್ಗಾವಣೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ರೆವಿನ್ಯೂ ಅಧಿಕಾರಿಗಳೊಡನೆ ಸೇರಿ ವಾದಿಗೆ ಸೇರಿದ ದಾವಾ ಆಸ್ತಿಯ ಖಾತೆಯನ್ನು ಅಕ್ರಮವಾಗಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ

ಸಂಬಂಧ ನಾನು ಖಾತೆ ಮಾಡಿಸಿಕೊಂಡ ನಂತರ ವಾದಿಯನ್ನು ದಾವಾ ಆಸ್ತಿಯಿಂದ ಹೊರಹಾಕಲು ಅಸಲು ದಾವಾ ನಂಬರ್ 175/2021 ರಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಾವು ವಾದಿಯನ್ನು ದಾವಾ ಆಸ್ತಿಯಿಂದ ಹೊರಹಾಕಲು ಪ್ರಯತ್ನಿಸಿದ ಕಾರಣ ಈ ದಾವೆಯನ್ನು ನಮ್ಮ ವಿರುದ್ದ ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗೆ ದಿನಾಂಕ 12.04.1951 ರ ದತ್ತು ಸ್ವೀಕಾರ ಪತ್ರದ ಮೂಲಕ ಬಂದಿರುವ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಜಯಲಕ್ಷ್ಮೀ, ಸೀತಾರಾ ಮತ್ತು ಶಿವಕುಮಾರ ಎಂಬುವರು ಗೊತ್ತು. ಇವರೆಲ್ಲರೂ ನನ್ನ ತಾತನ ಆಸ್ತಿ ಭಾಗಾಂಶ ಕೊಡಬೇಕೆಂದು ಅಸಲು ದಾವಾ ನಂಬರ್ 93/2005 ರಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯ ತೀರ್ಪಿನ ಪ್ರಕಾರ ದಾವಾ ಆಸ್ತಿ ನನ್ನ ತಾತನ ಸ್ವಯಾರ್ಜಿತ ಆಸ್ತಿ ಎಂದು ದಾವೆಯನ್ನು ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಜಯಲಕ್ಷ್ಮೀ, ಸೀತಾರಾ ಮತ್ತು ಶಿವಕುಮಾರ ವಾದಿಯ ಆಸ್ತಿಯನ್ನು ಹೇಗಾದರೂ ಮಾಡಿ ಹೊಡೆದುಕೊಳ್ಳಬೇಕೆಂದು ಅವರನ್ನು ದಾವಾ ಆಸ್ತಿಯಿಂದ ಹೊರಹಾಕಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ನಾನು ವಾದಿಯ ಆರೋಗ್ಯವನ್ನು ಇದುವರೆಗೂ ನೋಡಿಕೊಂಡಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯ ಬಗ್ಗೆ ವಾದಿ ನಮ್ಮ ಹೆಸರಿಗೆ ಯಾವುದೇ ದಾಖಲೆ ಮಾಡಿಕೊಟ್ಟಿಲ್ಲ ಎಂದರೆ ಅದರ ಬಗ್ಗೆ ಗೊತ್ತಿಲ್ಲ. ದಾವಾ ಆಸ್ತಿಯ ಆರ್.ಟಿ.ಸಿ ನಮ್ಮ ಹೆಸರಿನಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ವಾದಿಯನ್ನು ದಾವಾ ಆಸ್ತಿಯಿಂದ ಹೊರಹಾಕಲು ಪ್ರಯತ್ನಪಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು, ಮಾಲೀಕತ್ವ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ಈಗಾಗಲೇ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ವಾದಿಯ ಪರ ತೀರ್ಪು ಕೊಟ್ಟಿದ್ದರೂ ಸಹ ನಾನೇ ಸ್ವಾಧೀನ ಇರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಈಗ ನಾನು ಮನುಗನಹಳ್ಳಿಯಲ್ಲಿ ವಾಸವಿಲ್ಲ ಎಂದರೆ ಸುಳ್ಳು. ವಾದಿಗೆ ತೊಂದರೆ ಕೊಡಬೇಕೆಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವತ್ತೂ ಸ್ವಾಧೀನವಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**